ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 48-55
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸುರಪುರ ನಾಯಕರ ಆಶ್ರಯತಾಣ ನೀಲಕಂಠರಾಯನ ಗಡ್ಡಿ : ಒಂದು ಚಾರಿತ್ರಿಕ ಅಧ್ಯಯನ (ಕ್ರಿ.ಶ.1565–1630)

**ರಮೇಶ[1] ಮತ್ತು ಧರ್ಮರಾಯ[2]**

[1]ಸಂಶೋಧನಾ ವಿದ್ಯಾರ್ಥಿ ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
[2]ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

**Abstract:**

*ಕ್ರಿ.ಶ.1336 ರಿಂದ 1565ರವರೆಗೆ ವಿಜಯನಗರ ಸಾಮ್ರಾಜ್ಯದ ವೈಭವದ ಉನ್ನತಿಗಾಗಿ ಕಾರಣರಾದ 77 ಸಾಮಂತ ಮನೆತನಗಳಲ್ಲಿ, ಸುರಪುರ ನಾಯಕರ ವಂಶಸ್ಥರ ಮನೆತನವು ಒಂದು. ನಾಯಕರ ಪೂರ್ವಜರ ಅನೇಕ ನೆಲೆಗಳಲ್ಲಿ ಆನೆಗುಂದಿ, ಮುದಗಲ್ಲಿನ ಗೋಸಲಪೇಟೆ, ಜಲದುರ್ಗ ಕಿಲ್ಲೆ, ಕಕ್ಕೇರಿಯ ಸೋಮನಾಥನ ದೇವಾಲಯದಂತಹ ಸ್ಥಳಗಳು ಪ್ರಸ್ತತ ಸಾಕ್ಷಿಯಾಗುತ್ತವೆ. ಅಳಿಯ ರಾಮರಾಯನ ಕಾಲದ ಆಡಳಿತದಲ್ಲಿ ಕಲಬುರ್ಗಿ ಮತ್ತು ರಾಯಚೂರಿನ ಮುಸ್ಲಿಂ ಆಳ್ವಿಕೆಯ ಪ್ರದೇಶಗಳ ಮೇಲೆ ದಂಡೆಯಾತ್ರೆಯನ್ನು ಕೈಗೊಂಡು ಸಗರನಾಡಿನ ಕೇಂದ್ರ ಕೋಟೆಯಾದ ಸಗರದುರ್ಗವನ್ನು ಬಹುಮನಿ ಸುಲ್ತಾನರಿಂದ ಗೆದ್ದುಕೊಂಡು 'ಸಗರ ಸಂಕ್ರಮಣ ಧುರೀಣ'ನೆಂಬ ಬಿರುದನ್ನು ಪಡೆದ ಅಳಿಯ ರಾಮರಾಯನಿಗೆ ಸಗರನಾಡಿನ ಬೇಡ ನಾಯಕರು ತಮ್ಮ ಸೈನ್ಯದೊಂದಿಗೆ ಯುದ್ಧಗಳಲ್ಲಿ ಪಾಲ್ಗೊಂಡು ಕೋಟೆಯನ್ನು ತಮ್ಮದಾಗಿಸಿಕೊಂಡರೆಂದು ಐತಿಹ್ಯಗಳಿಂದ ತಿಳಿದುಬರುತ್ತದೆ[1]. ಕ್ರಿ.ಶ.1565ರಲ್ಲಿ ಚಿನ್ನಹನುಮನಾಯಕನ ಅನಂತರ ಕಕ್ಕೇರಿಯಲ್ಲಿ ನಾಯಕರ ಆಡಳಿತ ಅಧಿಕಾರವು ಅವನತಿ ಹೊಂದುತ್ತದೆ. ಸುಮಾರು ಕ್ರಿ.ಶ.1566 ರಿಂದ ಶಾಹಿ ಮನೆತನಗಳ ಅವನತಿಯವರೆಗೆ ಕಕ್ಕೇರಿಯನ್ನು ತೊರೆದು ಐದುಭಾವಿ, ನೀಲಕಂಠರಾಯನಗಡ್ಡಿ, ದೇವರಗಡ್ಡಿ, ಬೆಂಚಿಗಡ್ಡಿ, ಮೇಲಿನಗಡ್ಡಿ, ನೀರದೇವರಗಡ್ಡಿ ಎಂಬ ಪ್ರದೇಶಗಳಲ್ಲಿ ನೆಲೆಯೂರಿದರೆಂದು ಕಪಟರಾಳ ಕೃಷ್ಣರಾಯರು ಉಲ್ಲೇಖಿಸುತ್ತಾರೆ. ಈ ನೆಲೆಗಳಲ್ಲಿ ನೀಲಕಂಠರಾಯನ ಗಡ್ಡಿ (ದ್ವೀಪ) ಮಹತ್ವದ್ದು ಎಂದು ಗುರುತಿಸಲಾಗಿದೆ[2]. ಪ್ರಸ್ತುತ ಈ ಸ್ಥಳಗಳಲ್ಲಿ ದೊರೆತಿರುವ ವೀರಗಲ್ಲುಗಳನ್ನು, ಅರಮನೆಯನ್ನು, ಬುರುಜುಗಳನ್ನು, ರಕ್ಷಣಾ ತಡೆಗೋಡೆಗಳ ಜೊತೆಗೆ ದೇವಾಲಯಗಳ ಅವಶೇಷಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಅಧ್ಯಯನಕ್ಕೆ ಒಳಪಡಿಸುವುದೇ ಈ ಲೇಖನದ ಉದ್ದೇಶವಾಗಿದೆ.*

**Keywords:** *ಸುರಪುರ, ನಾಯಕರು, ನೀಲಕಂಠರಾಯನ ಗಡ್ಡಿ, ರಕ್ಷಣಾ ಕೋಟೆ, ವೀರಗಲ್ಲು.*

**ಪೀಠಿಕೆ**

ಕ್ರಿ.ಶ.1336 ರಿಂದ 1565ರವರೆಗೆ ವಿಜಯನಗರ ಸಾಮ್ರಾಜ್ಯದ ವೈಭವದ ಉನ್ನತಿಗಾಗಿ ಕಾರಣರಾದ ಎಪ್ಪತ್ತೇಳು (77) ಸಾಮಂತ ಮನೆತನಗಳಲ್ಲಿ, ಸುರಪುರ ನಾಯಕರ ವಂಶಸ್ಥರ ಮನೆತನವು ಒಂದು. ಕ್ರಿ.ಶ.1565ರಲ್ಲಿ ಚಿನ್ನಹನುಮನಾಯಕನ ಅನಂತರ ಕಕ್ಕೇರಿಯಲ್ಲಿ ನಾಯಕರ ಆಡಳಿತ

**Please cite this article as:** ರಮೇಶ ಮತ್ತು ಧರ್ಮರಾಯ. (2023). ಸುರಪುರ ನಾಯಕರ ಆಶ್ರಯತಾಣ ನೀಲಕಂಠರಾಯನ ಗಡ್ಡಿ:ಒಂದು ಚಾರಿತ್ರಿಕ ಅಧ್ಯಯನ (ಕ್ರಿ.ಶ.1565–1630). *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(4), 48–55.

ಅಧಿಕಾರವು ಅವನತಿ ಹೊಂದುತ್ತದೆ. ಏಕೆಂದರೆ ಕಕ್ಕೇರಿಯನ್ನು ಆರಂಭದಿಂದ ವಿಜಯಪುರ ಆದಿಲ್‌ಶಾಹಿ ಸುಲ್ತಾನರ ಅಧೀನದಲ್ಲಿ 'ಗಾಣಗೇರಿ' ಮನೆತನದ ಅಧಿಕಾರಿಗಳು ಆಳುತ್ತಿದ್ದರು. ಇವರು ಪ್ರಬಲರಾಗಿ ತಮ್ಮ ಆಡಳಿತವನ್ನು ಪೂರ್ವದಿಕ್ಕಿನ ಫಲವತ್ತಾದ ಭೂ ಪ್ರದೇಶವನ್ನು ವಿಸ್ತರಿಸಲು ಹಾಗೂ ಕೃಷಿ ಸಂಪತ್ತಿನ ಜೊತೆಗೆ ಭೂ ಕಂದಾಯವನ್ನು ಹೆಚ್ಚಿಸಲು ದಾಳಿಯನ್ನು ಕೈಗೊಂಡು ಈ ಭಾಗದ ಸಂಪತ್ತನು ಲೂಟಿಮಾಡಿ ನಾಯಕರನ್ನು ಹೊರನೂಕಿದರು. ಇದರ ಪರಿಣಾಮ ಕಕ್ಕೇರಿಯನ್ನು ಆಳ್ವಿಕೆ ಮಾಡುತ್ತಿದ್ದ ಹಾವಿನಾಯಕ, ಪೆದ್ದ ಸೋಮನಾಯಕ, ಬಲಿ ಸೋಮನಾಯಕರು ಶಾಹಿ ಮನೆತನಗಳು ಮತ್ತು ಅಧೀನದ ಗಾಣಗೇರಿ ದೇಸಾಯಿಗಳೆಂಬ ಅಧಿಕಾರಿಗಳ ದಬ್ಬಾಳಿಕೆಗೆ ತುತ್ತಾಗುತ್ತಾರೆ.

ಸುರಪುರ ತಾಲ್ಲೂಕಿನಿಂದ ದಕ್ಷಿಣದಿಕ್ಕಿಗೆ ಸುಮಾರು 20 ಕಿ.ಮೀ ದೂರದಲ್ಲಿ ಕಕ್ಕೇರಿ ಎಂಬ ಹೋಬಳಿ ಗ್ರಾಮವಿದೆ. ಈ ಗ್ರಾಮವು 250 ರಷ್ಟು ಭೌಗೋಳಿಕ ವಿಸ್ತೀರ್ಣವನ್ನು ಒಳಗೊಂಡಿದ್ದು, ಪ್ರಸ್ತುತ ಸುರಪುರ ತಾಲೂಕಿನ ಹೋಬಳಿ ಗ್ರಾಮವೆಂದು ಗುರುತಿಸಿಕೊಂಡಿದೆ. ಇಲ್ಲಿನ ಭೂಪ್ರದೇಶವು ಕೆಂಪು ಮಿಶ್ರಿತ ಕಪ್ಪು ಮಣ್ಣನ್ನು ಒಳಗೊಂಡಿದ್ದು, ವ್ಯವಸಾಯಕ್ಕೆ ಯೋಗ್ಯವಾಗಿದೆ. 2011ನೇ ಜನಗಣತಿಯ ಪ್ರಕಾರ 1,000 ಜನಸಂಖ್ಯೆಯನ್ನು ಒಳಗೊಂಡಿರುವುದು ದಾಖಲಾಗಿದೆ[3]. ಗ್ರಾಮದದಿಂದ ದಕ್ಷಿಣ ಭಾಗಕ್ಕೆ 15 ಕಿ.ಮೀ ಅಂತರದಲ್ಲಿ ಕೃಷ್ಣಾ ನದಿಯು ಹರಿಯುತ್ತದೆ. ನದಿಯ ಮಧ್ಯಭಾಗದಲ್ಲಿ ಗಡ್ಡಿಯಂತ ಆಕಾರದಲ್ಲಿ ಕಂಡುಬರುವ ಸಣ್ಣ ಪ್ರಮಾಣದ ಬೆಟ್ಟಗಳನ್ನು ಬೆಂಚಿಗಡ್ಡಿ, ನೀಲಕಂಠರಾಯನಗಡ್ಡಿಗಳೆಂದು ಗುರುತಿಸಲಾಗಿದೆ. ಇಂತಹ ಭೂಪ್ರದೇಶಗಳನ್ನು ಈ ಭಾಗದ ಸ್ಥಳೀಯ ಜನರು ಗಡ್ಡಿ ಎಂಬ ಹೆಸರಿನಿಂದ ಕರೆಯುತ್ತಾರೆ. ಸುತ್ತಲೂ ನದಿ, ದಟ್ಟವಾದ ಬೆಟ್ಟ–ಗುಡ್ಡಗಳಿಂದ ಆವರಿಸಲ್ಪಟ್ಟಿರುವ ಕಾರಣಗಳಿಂದ ನಾಯಕರು ಶಾಹಿ ಮನೆತನಗಳ ಆಕ್ರಮಣಗಳಿಂದ ರಕ್ಷಣೆಯನ್ನು ಪಡೆದುಕೊಳ್ಳಲು ಇಂತಹ ಸ್ಥಳಗಳಲ್ಲಿ ಆಶ್ರಯವನ್ನು ಪಡೆದರು ಎಂದು ಹೇಳಬಹುದು. ಮೂಲತಃ ನಾರಾಯಣಪುರ ಅಣೆಕಟ್ಟೆಯಿಂದ ಹರಿದ ಕೃಷ್ಣನದಿಯು ಜಲದುರ್ಗವೆಂಬ ಎತ್ತರದ ಬೆಟ್ಟದ ಪ್ರದೇಶದಲ್ಲಿ ಕವಲೊಡೆದು ದ್ವೀಪವನ್ನು ಸೃಷ್ಟಿಸಿಕೊಂಡು ಮುಂದೆ ಸಾಗುತ್ತದೆ. ನದಿಯು ಮತ್ತೆ ಒಂದುಗೂಡಿ ಸುಮಾರು 45 ಕಿ.ಮೀ ದೂರದಲ್ಲಿ ಹರಿದು ನೀಲಕಂಠರಾಯನ ಗಡ್ಡಿಯ ಜೊತೆಗೆ ಇತರೇ ಗಡ್ಡಿಗಳನ್ನು ಸೃಷ್ಟಿಸಿಕೊಂಡು ಮುಂದೆ ಸಾಗಿರುವುದನ್ನು ಪ್ರಸ್ತುತ ಕಾಣುತ್ತೇವೆ[4].




**ಚಿತ್ರ 1: ನೀಲಕಂಠರಾಯನಗಡ್ಡಿ ಉತ್ತರ ದಿಕ್ಕಿಗೆ ಬರುವ ದ್ವಾರಬಾಗಿಲ ನೋಟ.**



ಚಿತ್ರ 3




**ಚಿತ್ರ 2&3: ಕಿಲ್ಲೆಯ ಉತ್ತರ ಭಾಗದ ದ್ವಾರಬಾಗಿಲ ಎಡ & ಬಲ ಭಾಗದಲ್ಲಿ ನಿರ್ಮಿಸಲ್ಪಟ್ಟ ರಕ್ಷಣಾ ತಡೆಗೋಡೆಗಳು.**

ಚಿತ್ರ 4



ಚಿತ್ರ 5



**ಚಿತ್ರ 4&5 : ಕಿಲ್ಲೆಯ ದಕ್ಷಿಣ ಭಾಗದ ದ್ವಾರಬಾಗಿಲ ಎಡ & ಬಲ ಭಾಗದಲ್ಲಿ ನಿರ್ಮಿಸಲ್ಪಟ್ಟ ರಕ್ಷಣಾ ತಡೆಗೋಡೆಗಳು.**

## ಸುರಪುರ ನಾಯಕರ ಆಶ್ರಯ ತಾಣವಾಗಿ ನೀಲಕಂಠರಾಯನ ಗಡ್ಡಿ

ನೀಲಕಂಠರಾಯನಗಡ್ಡಿ ಭೂಪ್ರದೇಶವು ಪೂರ್ವ ಮತ್ತು ಪಶ್ಚಿಮಾಭಿಮುಖವಾಗಿ ಸುಮಾರು 1,800 ಮೀಟರ್ ಭೂ ವಿಸ್ತೀರ್ಣವನ್ನು ಹೊಂದಿದ್ದು, ದಕ್ಷಿಣೋತ್ತರವಾಗಿ ಸುಮಾರು 2,580 ಮೀಟರ್ ವ್ಯಾಪ್ತಿಯನ್ನು ಒಳಗೊಂಡಿದೆ. ಈ ಪ್ರದೇಶವು ಪೆದ್ದ ಸೋಮನಾಯಕನ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದು ವಿದ್ವಾಂಸರ ಅಭಿಮತ. ಕೋಟೆಯ ಪೂರ್ವ ಮತ್ತು ದಕ್ಷಿಣ ದಿಕ್ಕುಗಳು ಒಂದೊಂದು ಮುಖ್ಯದ್ವಾರ ಬಾಗಿಲುಗಳನ್ನು ಹೊಂದಿದೆ. ಗಡ್ಡಿ ಭೂಪ್ರದೇಶವು ಕೃಷ್ಣಾ ನದಿಯ ಮೇಲ್ಮೈಮಟ್ಟದಿಂದ 400 ಮೀಟರ್ ಎತ್ತರದಲ್ಲಿದ್ದು ಸಮತಟ್ಟಾದ ಭೂಪ್ರದೇಶವನ್ನು ಒಳಗೊಂಡಿದೆ[5].

ಕಕ್ಕೇರಿಯಿಂದ ಬಂದ ಪೆದ್ದ ಸೋಮನಾಯಕನು ಈ ಸ್ಥಳದಲ್ಲಿ ನೆಲೆಯೂರಿ ಒಂದು ಅರಮನೆಯನ್ನು ಹಾಗೂ ಸುತ್ತಲೂ ತಡೆ (ರಕ್ಷಣಾ) ಗೋಡೆಗಳನ್ನು

ನಿರ್ಮಿಸಿ ಆಡಳಿತವನ್ನು ಮುನ್ನಡೆಸಿದನು ಎನ್ನುವುದಕ್ಕೆ ಸ್ಥಳೀಯವಾಗಿ ಕುರುಹುಗಳು ಲಭ್ಯವಾಗುತ್ತವೆ. ಗಡ್ಡಿಯ ಪಶ್ಚಿಮ ಭಾಗದಲ್ಲಿ ಪೂರ್ವದಿಕ್ಕಿಗೆ ಮುಖಮಾಡಿ ಅರಮನೆಯನ್ನು ನಿರ್ಮಿಸಲಾಗಿದ್ದು, ಪ್ರಸ್ತುತ ಅರಮನೆ ಶಿಥಿಲಗೊಂಡು ಹಾಳಾಗಿರುವ ಗೋಡೆಯ ಅವಶೇಷಗಳು ಮಾತ್ರ ಕಂಡುಬರುತ್ತವೆ. ಅರಮನೆಯ ಹಿಂಭಾಗದಿಂದ ಎಡ ಮತ್ತು ಬಲ ಭಾಗಗಳಲ್ಲಿ ತಡೆ (ರಕ್ಷಣಾ) ಗೊಡೆಗಳನ್ನು ನಿರ್ಮಿಸಿರುವುದನ್ನು ಗುರುತಿಸಲಾಗಿದೆ. ನೀಲಕಂಠರಾಯನ ಗಡ್ಡಿ (ದ್ವೀಪ) ಎಂಬ ಬೆಟ್ಟದಾಕಾರದ ಭೂಪ್ರದೇಶವು ಶಿವನ ಕೈಯಲ್ಲಿರುವ ಶಂಖದಾಕೃತಿಯಲ್ಲಿರುವುದನ್ನು ಕಾಣುತ್ತೇವೆ[6].

ಕ್ರಿ.ಶ.15ನೇ ಶತಮಾನದ ಪೂರ್ವ ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ ಕಾಣಬರುವ ಶಸ್ತ್ರಾಸ್ತ್ರಗಳೆಂದರೆ ಬಿಲ್ಲು, ಬಾಣ, ಕತ್ತಿ, ಗುರಾಣಿ, ಈಟಿ, ಭರ್ಜಿಗಳಾಗಿವೆ. ಈ ವೀರಗಲ್ಲುಗಳಲ್ಲಿ ಬಂದೂಕುಗಳಿರುವ ದಾಖಲುಗಳು ಕಂಡುಬರುವುದಿಲ್ಲ. ಆದರೆ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ವೀರಗಲ್ಲುಗಳಲ್ಲಿ ವೀರರು ತಮ್ಮ ಕೈಗಳಲ್ಲಿ ಕತ್ತಿಯ ಜೊತೆಗೆ ಬಂದೂಕುಗಳನ್ನು ಹಿಡಿದಿರುವುದನ್ನು ಗುರುತಿಸಬಹುದು. ಅಂತಹ ವೀರಗಲ್ಲುಗಳಲ್ಲಿ ನೀಲಕಂಠರಾಯನಗಡ್ಡಿ ಎಂಬ ಪ್ರದೇಶದಲ್ಲಿ ಪತ್ತೆಹಚ್ಚಲಾಗಿರುವ ಕುದುರೆ (ಅಶ್ವ)ದಳದ ವೀರಗಲ್ಲು ಕೂಡ ಒಂದು. ಈ ವೀರಗಲ್ಲು ಸೈನಿಕ ದಳದ ವೀರನು (ಸರದಾರನು) ಕುದುರೆಯ ಮೇಲೆ ಕುಳಿತು ಕೈಯಲ್ಲಿ ಕತ್ತಿಯನ್ನು ಹಿಡಿದು, ಟೊಂಕದಲ್ಲಿ ಬಾಕು, ಚೂರಿಯೊಂದಿಗೆ ಮುಂದೆ ಸಾಗುತ್ತಿರುವುದನ್ನು ಕಾಣುತ್ತೇವೆ. ಇದು ನಾಯಕರ ಪೂರ್ವಜರ ಆಳ್ವಿಕೆಯಲ್ಲಿ ಕೆತ್ತನೆ ಮಾಡಿರುವ ವೀರಗಲ್ಲು ಎಂದು ಗುರುತಿಸಬಹುದು[7].

ನೀಲಕಂಠರಾಯನಗಡ್ಡಿ ಪ್ರದೇಶದಲ್ಲಿ ಒಟ್ಟು 2 ವೀರಗಲ್ಲುಗಳು ಲಭ್ಯವಾಗಿದ್ದು, ಅದರಲ್ಲಿ ಒಂದನೆಯ ವೀರಗಲ್ಲನು ಮಾತ್ರ ಚಿತ್ರ 6 ರಲ್ಲಿ ಕಾಣುತ್ತೇವೆ. ಈ ವೀರಗಲ್ಲು ಕಪ್ಪು ಬಣ್ಣದ ಕಲ್ಲಿನಲ್ಲಿ ಕೆತ್ತನೆಗೆ ಒಳಪಟ್ಟಿದ್ದು 24*30 ಇಂಚು ಉದ್ದ & ಅಗಲವನ್ನು ಒಳಗೊಂಡಿದೆ. ವೀರಗಲ್ಲನ್ನು ಸೂಕ್ಷ್ಮವಾಗಿ ಗಮನಿಸಿದರೆ ಬೃಹದಾಕಾರದ ಬಂಡೆಗಲ್ಲಿನಿಂದ ಒಳಗೊಂಡಿತ್ತೆಂದು ತಿಳಿದುಬರುತ್ತದೆ. ಕಾಲಗಳು ಕಳೆದಂತೆ ಪ್ರಕೃತಿ ವಿಕೋಪಕ್ಕೆ ಒಳಗಾಗಿ ವೀರಗಲ್ಲಿನ ಬಂಡೆಯು ಶಿಥಿಲಗೊಂಡು ಅನಾಥವಾಗಿ ಬಿದ್ದಿರುವ ಬಿಡಿಯಾದ ಭಾಗಗಳನ್ನು ಕಾಣಬಹುದಾಗಿದೆ. ಚಿತ್ರ 6ರಲ್ಲಿ ವೀರಗಲ್ಲಿನಲ್ಲಿ ಕುದುರೆ ಮತ್ತು ಕುದುರೆ ಸವಾರನೊಂದಿಗೆ ಒಬ್ಬ ಹಿಂಬದಿ ಸೈನಿಕನು ಇರುವುದನ್ನು ಕಾಣುತ್ತೇವೆ. ಇದರಲ್ಲಿ ಒಬ್ಬ ಕಾಲ್ದಳದ ಸೈನಿಕನಾದರೆ ಮತ್ತೊಬ್ಬ ಅಶ್ವದಳದ ಸೈನಿಕನಾಗಿದ್ದನೆಂದು ತಿಳಿದುಬರುತ್ತದೆ[8].




**ಚಿತ್ರ 6: ನೀಲಕಂಠರಾಯಗಡ್ಡಿಯಲ್ಲಿ ದೊರೆತ ವೀರಗಲ್ಲು.**

ವೀರಗಲ್ಲಿನ ಕಾಲ್ದಳದ ಸೈನಿಕನು ಅಶ್ವದ (ಕುದುರೆ) ಹಿಂಬದಿಯಲ್ಲಿ ಚಲಿಸುವ ಭಂಗಿಯಲ್ಲಿ ಕಂಡುಬರುತ್ತಾನೆ. ಈತನ ಎಡಗೈಯಲ್ಲಿ ಗುರಾಣಿ ಮತ್ತು ಬಲಗೈಯಲ್ಲಿ ಭರ್ಜಿಯನ್ನು ಹಿಡಿದು ಅಶ್ವ (ಕುದುರೆ)ದಳದ ಹಿಂಬಾಲಕನಾಗಿ ಸಾಗುತ್ತಿರುವುದನ್ನು ಕಾಣುತ್ತೇವೆ. ಈತನ ತಲೆಯ ಮೇಲೆ ಒಂದು ತಲೆಗವಚವಿದ್ದು, ಸೈನಿಕ ಸಮವಸ್ತ್ರ ಧರಿಸಿರುವುದನ್ನು ಗುರುತಿಸಬಹುದು. ಎರಡನೆಯದಾಗಿ ಅಶ್ವದಳದ ಸೈನಿಕನನ್ನು ಗಮನಿಸಿದರೆ ಈತನು ಕುದುರೆಯ ಮೇಲೆ ಕುಳಿತು ಸವಾರಿ ಮಾಡುತ್ತಿರುವುದು ಕಂಡುಬರುತ್ತದೆ. ಈತನು ಎಡಗೈಯಲ್ಲಿ ಕುದುರೆ ಲಗಾಮನ್ನು ಬಿಗಿಯಾಗಿ ಹಿಡಿದುಕೊಂಡು, ಬಲಗೈಯಲ್ಲಿ ಕತ್ತಿಯನ್ನು ಹಿಡಿದುಕೊಂಡು,

ತಲೆಗವಚ ಮತ್ತು ಸೈನಿಕ ಸಮವಸ್ತ್ರಗಳನ್ನು ಧರಿಸಿ ವೀರಾವೇಶದಿಂದ ಮುಂದೆ ಸಾಗುತ್ತಿರುವ ಭಂಗಿಯಲ್ಲಿ ಇರುವುದು ಕಂಡುಬರುತ್ತದೆ[9].

ಭಗ್ನಗೊಂಡಿರುವ ವೀರಗಲ್ಲನ್ನು ಸೂಕ್ಷ್ಮವಾಗಿ ಗಮನಿಸಿದರೆ ವಿಜಯನಗರದ ಸಾಮಂತ ನಾಯಕರ ಕಾವಧಿಯಲ್ಲಿ ಈ ವೀರಗಲ್ಲು ಕೆತ್ತನೆಗೆ ಒಳಪಟ್ಟಿದೆ ಎಂಬುದನ್ನು ಗುರುತಿಸಬಹುದು. ಈ ವೀರಗಲ್ಲು ವಿಜಯನಗರ ಕಾಲದ್ದು ಎನ್ನುವದಕ್ಕೆ ಗಡ್ಡಿಯಲ್ಲಿ ಶಿವಲಿಂಗಮೂರ್ತಿಯನ್ನು ಒಳಗೊಂಡ ದೇವಾಲಯವಿದ್ದು, ಇದರಿಂದ ವಿಜಯನಗರದ ಅರಸರು ಮೂಲತಃ ಶೈವರಾಗಿದ್ದ ಕಾಲಾವಧಿಯಲ್ಲಿ ಇವರ ಸಾಮಂತ ಪಾಳೆಗಾರ ಮನೆತನವಾದ ಸುರಪುರ ನಾಯಕರ ಪೂರ್ವಜರು ಈ ಸ್ಥಳವು ಕ್ರಿ.ಶ.1565ರಲ್ಲಿ ನಾಯಕರಿಗೆ ಆಶ್ರಯತಾಣವಾಗಿ ಆಳ್ವಿಕೆಗೆ ಒಳಪಟ್ಟಿರುತ್ತದೆ. ಶಾಹಿಮನೆತನಗಳ ದಬ್ಬಾಳಿಕೆಯ ಅವಧಿಯಲ್ಲಿ ವೀರಗಲ್ಲನು ಪೆದ್ದ ಸೋಮನಾಯಕನು ಕೆತ್ತನೆಗೆ ಒಳಪಡಿಸಿದನೆಂದು ಊಹಿಸಬಹುದಾಗಿದೆ. ತಾಳಿಕೋಟೆ ಯುದ್ಧದ ಅನಂತರ ಗಡ್ಡಿ ಪ್ರದೇಶವು ಸುರಪುರದ ನಾಯಕರ ಪೂರ್ವಜರ ಆಳ್ವಿಕೆಯನ್ನು ಸುಲಭಗೊಳಿಸಿ ನಾಯಕರ ಮನೆತನದ ಬೆಳವಣಿಗೆಗೆ ದಾರಿಯಾಯಿತು[10].

ಚಿತ್ರ 7



**ಚಿತ್ರ 7: ನೀಲಕಂಠರಾಯಗಡ್ಡಿಯಲ್ಲಿ ಕಂಡುಬರುವ ಸಿಡಿಮದ್ದು (ತೋಪು) ಇಡುವ ಗೋಪುರ.**

ನೀಲಕಂಠರಾಯನಗಡ್ಡಿಯ ಪಶ್ಚಿಮ ಭಾಗದಲ್ಲಿನ ತಡೆಗೋಡೆಯ ಪಕ್ಕದಲ್ಲಿ ಉತ್ತರ ಮತ್ತು ದಕ್ಷಿಣಾಭಿಮುಖವಾಗಿ ಅರಮನೆಯ ಮುಂಭಾಗದಲ್ಲಿ ಒಂದು ತೋಪಿನ ಕಿಲ್ಲೆಯನ್ನು ನಿರ್ಮಿಸಲಾಗಿದೆ. ಇದು ನೆಲ ಭಾಗದಿಂದ 10 ಮೀಟರ್ ಎತ್ತರದಲ್ಲಿದ್ದು, ಮೇಲ್ಭೈಭಾಗದಲ್ಲಿ ತೋಪು ಇಟ್ಟು ಗುಂಡುಹಾರಿಸುವ ಉದ್ದನೆಯ ರಂಧ್ರದಾಕಾರವನ್ನು ಒಳಗೊಂಡ ಗೋಪುರವಿದೆ. ಗೋಪುರವನ್ನು ಅಲ್ಲಿನ ಸ್ಥಳೀಯವಾಗಿ ದೊರೆತ ಬಿಳಿ ಮತ್ತು ಕೆಂಪು ಬಣ್ಣದ ದೊಡ್ಡ ಮತ್ತು ಚಿಕ್ಕ ಗಾತ್ರದ ಕಲ್ಲುಗಳೊಂದಿಗೆ ಸುಣ್ಣದ ಗಾರೆಯಿಂದ ನಿರ್ಮಿಸಲಾಗಿದೆ. ಪ್ರಸ್ತುತ ಗೋಪುರದ ಸೂತ್ತಲ್ಲಿನ ಪ್ರದೇಶವು ಮುಳ್ಳಿನಾಕಾರದ ಗಿಡ–ಮರಗಳಿಂದ ಬೆಳೆದು ಶಿಥಿಲಗೊಂಡು ಹಾಳುಬಿದ್ದಿರುವುದನ್ನು ಕಾಣುತ್ತೇವೆ[11].

ಚಿತ್ರ 8



**ಚಿತ್ರ–08.ಕಿಲ್ಲೆಯ ರಕ್ಷಣಾ ತಡೆಗೊಡೆಗಳು**

ಚಿತ್ರ 9



**ಚಿತ್ರ 9: ನಾಲ್ಕು ದಿಕ್ಕುಗಳಲ್ಲಿರುವ ಬುರುಜು**

ಚಿತ್ರ 8 ಮತ್ತು 9ರಲ್ಲಿ ಕಂಡುಬರುವಂತೆ ಕಿಲ್ಲೆಯ ತಡೆಗೋಡೆಗಳಿಗೆ ಒಟ್ಟು 3 ಬುರುಜುಗಳನ್ನು ನಿರ್ಮಿಸಲಾಗಿದೆ. ಎತ್ತರವಾದ ಭೂಪ್ರದೇಶದಲ್ಲಿ ನೆಲಮಟ್ಟದಿಂದ 20 ಮೀಟರ್ ಎತ್ತರದಲ್ಲಿ ನಿರ್ಮಾಣ ಮಾಡಲಾಗಿದ್ದು, ಪ್ರತಿಯೊಂದು ಬುರುಜನ್ನು 850 ಮೀಟರ್ ಅಂತರದಲ್ಲಿ ನಿರ್ಮಿಸಲಾಗಿದೆ. ಕಿಲ್ಲೆಯ ಮೇಲೆ ಶತ್ರುಗಳ ಆಕ್ರಮಣಗಳನ್ನು ದೂರದಿಂದ ಗುರುತಿಸಿ ಯುದ್ಧವನ್ನು ತಡೆಹಿಡಿಯಲು ಬುರುಜುಗಳನ್ನು ಬಳಸುತ್ತಿದ್ದರೆಂದು ಕಂಡುಬರುತ್ತದೆ[12].

ಚಿತ್ರ 10



**ಚಿತ್ರ 10:** ಈಶ್ವರ (ಶಿವನ) ದೇವಾಲಯ.

ಚಿತ್ರ 11




**ಚಿತ್ರ 11:** ನೀಲಕಂಠೇಶ್ವರನ ವಿಗ್ರಹ.

ಚಿತ್ರ 10 ಮತ್ತು 11ರಲ್ಲಿ ಕಂಡುಬರುವ ಈಶ್ವರ ದೇವಾಲಯವು ದಕ್ಷಿಣದಿಕ್ಕಿಗೆ ಕಿಲ್ಲೆಯಿಂದ 200 ಮೀಟರ್ ಅಂತರದಲ್ಲಿರುವ ವನದಲ್ಲಿದೆ. ಈ ದೇವಾಲಯವನ್ನು ಕೆಂಪು ಮತ್ತು ಬಿಳಿ, ಕಪ್ಪು ಕಲ್ಲುಗಳ ಜೊತೆಗೆ ಸುಣ್ಣದ ಗಾರೆಯನ್ನು ಬಳಸಿ ನಿರ್ಮಿಸಲಾಗಿದೆ. ಗಡ್ಡಿಯಲ್ಲಿ ಈಶ್ವರ ದೇವಾಲಯ ಇರುವ ಕಾರಣದಿಂದ ಈ ಸ್ಥಳಕ್ಕೆ ನೀಲಕಂಠರಾಯನಗಡ್ಡಿ ಎಂಬ ಹೆಸರು ಬಂದಿರಬಹುದು ಎಂಬ ಅಭಿಪ್ರಾಯವಿದೆ. ಪ್ರಸ್ತುತ ಈ ಭಾಗದ ಸ್ಥಳೀಯರು ಇದನ್ನು 'ಗಡ್ಡಿ' ಎಂಬ ಹೆಸರನಿಂದಲೇ ಇಂದಿಗೂ ಕರೆಯುವುದು ಕಂಡುಬರುತ್ತದೆ[13].

ಚಿತ್ರ 12




**ಚಿತ್ರ 12:** ಆಂಜನೇಯ ದೇವಾಲಯ

ಚಿತ್ರ 13



**ಚಿತ್ರ 13:** ಆಂಜನೇಯ (ಮಾರುತಿ) ಮೂರ್ತಿ.

ಚಿತ್ರ 12 ಮತ್ತು 13ರಲ್ಲಿ ಕಂಡುಬರುವ ಆಂಜನೇಯ ದೇವಾಲಯವು ದಕ್ಷಿಣ ಭಾಗದಲ್ಲಿರುವ ಶಿವನ ದೇವಾಲಯದ ಪಕ್ಕದಲ್ಲಿದೆ. ಸುರಪುರ

ನಾಯಕರ ಪೂರ್ವಜರು ಕೂಡ ಆಂಜನೇಯನ ಭಕ್ತರಾಗಿದ್ದರು ಎನ್ನುವುದಕ್ಕೆ ಸಾಕ್ಷಿಯಾಗುತ್ತದೆ. ಈ ಆಧಾರದ ಮೇಲೆ ನೀಲಕಂಠರಾಯನಗಡ್ಡಿಯು ನಾಯಕರ ಆಡಳಿತಕ್ಕೆ ಒಳಪಟ್ಟಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತದೆ. ದೇವಾಲಯವನ್ನು ಕೆಂಪು, ಬಿಳಿ ಮತ್ತು ಕಪ್ಪು ಬಣ್ಣದ ಕಲ್ಲುಗಳ ಜೊತೆಗೆ ಸುಣ್ಣದ ಗಾರೆಯನ್ನು ಬಳಸಿ ನಿರ್ಮಿಸಲಾಗಿದೆ. ಈಶ್ವರ ದೇವಾಲಯದ ಹೊರಭಾಗದಲ್ಲಿ ಕಂಡುಬರುವ ಕಲ್ಲುಗಳ ಆಧಾರದ ಮೇಲೆ ಈ ಎರಡು ದೇವಾಲಯಗಳ ನಿರ್ಮಾಣದ ಕುರಿತು ಗುರುತಿಸಬಹುದು. ಗಡ್ಡಿಯ ದಕ್ಷಿಣ ಎಡಭಾಗ ಈಶ್ವರ ಮತ್ತು ಬಲಭಾಗ ಆಂಜನೇಯ ದೇವಾಲಯಗಳನ್ನು ಸ್ಥಳೀಯರು ಜಿರ್ಣೋದ್ದಾರಮಾಡಿ ಸುಣ್ಣವನ್ನು ಬಳಿದು ಭಕ್ತಿಯಿಂದ ಇಂದಿಗೂ ಪೂಜಿಸುತ್ತಿರುವುದನ್ನು ಕಾಣುತ್ತೇವೆ[14].

ಜಕ್ಕಪ್ಪ ನಾಯಕನು ಕ್ರಿ.ಶ.1565ರ ತಾಳಿಕೋಟೆ ಯುದ್ಧದ ಅನಂತರ ನೀಲಕಂಠರಾಯನಗಡ್ಡಿಯನ್ನು ಕೇಂದ್ರವಾಗಿಸಿಕೊಂಡು ಜಂಗಿನಗಡ್ಡಿ, ಮೇಲಿನಗಡ್ಡಿ, ಬೆಣಚಿನಗಡ್ಡಿ, ನೀರದೇವರಗಡ್ಡಿ ಹಾಗೂ ದೇವರಗಡ್ಡಿ ಸ್ಥಳಗಳ ಜೊತೆಗೆ ಕಕ್ಕೇರಿಯ ಮತ್ತು ಸುತ್ತಲ್ಲಿನ ಗ್ರಾಮಗಳನ್ನು ಆಡಳಿತದ ವ್ಯಾಪ್ತಿಗೆ ಒಳಪಡಿಸಿದನು. ಗಡ್ಡಿ ಪ್ರದೇಶವು ಐತಿಹಾಸಿಕ ಸ್ಥಳವೆಂದು ಗುರುತಿಸಿಕೊಂಡರು ಇಲ್ಲಿ ನಿರ್ಮಿಸಲಾದ 2 ಮುಖ್ಯ ದ್ವಾರಬಾಗಿಲುಗಳು, 3 ವೀಕ್ಷಣ(ಕಾವಲು) ಗೋಪುರಗಳು, 1 ಸಿಡಿಮದ್ದಿನ ಗೋಪುರ, ಅರಮನೆ ಜೊತೆಗೆ ರಕ್ಷಣಾ ತಡೆಗೋಡೆಗಳ ಅವಶೇಷಗಳಿಂದ ಈ ಸ್ಥಳವು ಸುರಪುರ ನಾಯಕರ ಪೂರ್ವಜರ ಆಡಳಿತದ ಕೇಂದ್ರಸ್ಥಾನವಾಗಿತ್ತು. ನಾಯಕರು ಆರಂಭದಲ್ಲಿ ಶೈವರಾಗಿದ್ದು, ಅನಂತರದಲ್ಲಿ ವೈಷ್ಣವರಾಗಿ ಕಕ್ಕೇರಿ, ವಾಗಣಗೇರಿ ಮತ್ತು ಸುರಪುರವನ್ನು ಕೇಂದ್ರಸ್ಥಾನವನ್ನಾಗಿ ಆಡಳಿತಕ್ಕೆ ಒಳಪಡಿಸಿರುವುದು ಆಧುನಿಕ ಭಾರತ ಇತಿಹಾಸದ ಬರವಣಿಗೆಗಳಿಂದ ತಿಳಿದುಬರುತ್ತದೆ[15].

**ಉಪಸಂಹಾರ**

ಒಟ್ಟಾರೆಯಾಗಿ ತಾಳಿಕೋಟೆ ಕದನದ ಅನಂತರ ಶಾಹಿ ಮನೆತನಗಳ ದಬ್ಬಾಳಿಕೆಯಿಂದ ಸುರಪುರ ನಾಯಕರ ಪೂರ್ವಜರು ಕಕ್ಕೇರಿಯ ನೀಲಕಂಠರಾಯನಗಡ್ಡಿ ಭೂಪ್ರದೇಶದಲ್ಲಿ ಒಂದು ಕೋಟೆಯನ್ನು ಸ್ಥಾಪಿಸಿ, ಅದರ ಸುತ್ತಲೂ ರಕ್ಷಣೆಗಾಗಿ ತಡೆಗೊಡೆಯನ್ನು ನಿರ್ಮಿಸಿ ಆಡಳಿತವನ್ನು ನಡೆಸಿದರು ಎಂಬುವುದಕ್ಕೆ ಪ್ರಸ್ತುತ ಆ ಸ್ಥಳಗಳಲ್ಲಿ ದೊರೆತಿರುವ ವೀರಗಲ್ಲುಗಳು, ಅರಮನೆ, ಬುರುಜುಗಳು, ರಕ್ಷಣಾ ತಡೆಗೊಡೆಗಳ ಜೊತೆಗೆ ದೇವಾಲಯಗಳ ಅವಶೇಷಗಳಿಂದ ಸುರಪುರ ನಾಯಕರಿಗೆ ಈ ಸ್ಥಳವು ಆಶ್ರಯ ತಾಣವಾಗಿತ್ತು ಎಂಬುವುದನ್ನು ಈ ಮೇಲಿನ ಆಧಾರಗಳಿಂದ ದಾಖಲಿಸಬಹುದಾಗಿದೆ.

**ಕೊನೆಟಿಪ್ಪಣಿಗಳು**


1. ಕಪಟರಾಳ ಕೃಷ್ಣರಾಯರು. (1977). *ಸುರಪುರ ಸಂಸ್ಥಾನದ ಇತಿಹಾಸ.* ಪು.2.
2. ಅದೇ. ಪು. 3.
3. ರುದ್ರಸ್ವಾಮಿಮಠ ರೇವಣ ಸಿದ್ದಯ್ಯ. (1986). *ಸುರಪುರ ತಾಲೂಕ ದರ್ಶನ.* ಪು.14.
4. ಅದೇ. ಪು.22.
5. ಪಂಡಿತ ಜನಾರ್ದನ ಪಾಣಿಭಾತೆ.. (2019). *ಸುರಪುರ ಕಥನ.* ಪು.6.
6. ಅದೇ. ಪು.7.
7. ತಾರಿಹಳ್ಳಿ ಹನುಮಂತಪ್ಪ. (ಸಂ.). (2012). *ನಾಯಕರ ಮಹಾಸಂಸ್ಥಾನ ಸುರಪುರ.* ಪು.09.
8. ಅದೇ. ಪು.10.
9. Aruni, S. K. (2004). *Surapura Samsthana Historical and Archaeological Study of Poligar State in South India.* P.6-7.

10. ನಾಯಕ, ಡಿ.ಬಿ. (ಪ್ರ.ಸಂ) (2017). *ಕರ್ನಾಟಕ ಗ್ರಾಮ ಚರಿತ್ರೆ ಕೋಶ–ಯಾದಗಿರಿ.* ಪು.288.
11. ಅಮರೇಶ ಯತಗಲ್. (2018). *ಚಾರಿತ್ರಿಕ ಸುರಪುರ ಅಧ್ಯಯನಾತ್ಮಕ ನೋಟಗಳು.* ಪು.25.
12. ರಾಜಗೋಪಾಲ ಎಂ. ವಿಭೂತಿ., ಕೃಷ್ಣಾ ವಿ. ಸುಬೇದಾರ. (ಸಂ.) (2016). *ಸಗರನಾಡ ಸೌರಭ.* ಪು.10.
13. ಅದೇ. ಪು. 56.
14. ರಾಜಗೋಪಾಲ ಎಂ. ವಿಭೂತಿ. (2023). *ಸುರಪುರ ಗಿರಿದುರ್ಗ ದರ್ಶನ.* ಪು.38.
15. ಅದೇ. ಪು.39.

**ಪರಾಮರ್ಶನ ಗ್ರಂಥಗಳು**

- ಅಮರೇಶ ಯತಗಲ್. (2018). *ಚಾರಿತ್ರಿಕ ಸುರಪುರ ಅಧ್ಯಯನಾತ್ಮಕ ನೋಟಗಳು.* ಪಲ್ಲವಿ ಪ್ರಕಾಶಕನ.
- ಕಪಟರಾಳ ಕೃಷ್ಣರಾಯರು. (1977). *ಸುರಪುರ ಸಂಸ್ಥಾನದ ಇತಿಹಾಸ.* ಪು.ಶ. ಪ್ರಕಾಶನ.
- ನಾಯಕ, ಡಿ.ಬಿ. (ಪ್ರ.ಸಂ) (2017). *ಕರ್ನಾಟಕ ಗ್ರಾಮ ಚರಿತ್ರೆ ಕೋಶ–ಯಾದಗಿರಿ. ಕನ್ನಡ ಜಾನಪದ ವಿಶ್ವವಿದ್ಯಾಲಯ.*
- ಪಂಡಿತ ಜನಾರ್ದನ ಪಾಣಿಭಾತೆ.. (2019). *ಸುರಪುರ ಕಥನ.* ಎನ್. ಪ್ರಕಾಶನ.
- ರುದ್ರಸ್ವಾಮಿಮಠ ರೇವಣ ಸಿದ್ದಯ್ಯ. (1986). *ಸುರಪುರ ತಾಲೂಕ ದರ್ಶನ.* ಐ.ಬಿ.ಎಚ್. ಪ್ರಕಾಶನ.
- ರಾಜಗೋಪಾಲ ಎಂ. ವಿಭೂತಿ., ಕೃಷ್ಣಾ ವಿ. ಸುಬೇದಾರ. (ಸಂ.) (2016). *ಸಗರನಾಡ ಸೌರಭ.* ಎನ್. ಪ್ರಕಾಶನ.
- ರಾಜಗೋಪಾಲ ಎಂ. ವಿಭೂತಿ. (2023). *ಸುರಪುರ ಗಿರಿದುರ್ಗ ದರ್ಶನ.* ಎನ್. ಪ್ರಕಾಶನ.
- ತಾರಿಹಳ್ಳಿ ಹನುಮಂತಪ್ಪ. (ಸಂ.). (2012). *ನಾಯಕರ ಮಹಾಸಂಸ್ಥಾನ ಸುರಪುರ.* ಕನ್ನಡ ವಿ.ವಿ.